## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 93/2021**

| | | |
|---|---|---|
| ಸಾಕ್ಷಿದಾರರ ಹೆಸರು | : ಮಧು ವಿ ಎ | ಪಿಡಬ್ಲ್ಯೂ : 21 |
| ತಂದೆಯ / ಗಂಡನ ಹೆಸರು | : ಅಪ್ಪಾಜಿ ಗೌಡ | ಸಿಡಬ್ಲ್ಯೂ : 36 |
| ವಯಸ್ಸು | : 28 ವರ್ಷ | |
| ಉದ್ಯೋಗ | : ಪೊಲೀಸ್ ಪೇದೆ , ಸಿ ಎನ್ ಕ್ರೈಂ ಪೊಲೀಸ್ ಠಾಣೆ , ಮೈಸೂರು | |
| ವಾಸಸ್ಥಳ | : ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ 21.06.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ

1. ನಾನು 2018 ರಿಂದ ಸಿ ಎನ್ ಕ್ರೈಮ್ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ಬಿ ಎಸ್.ಸಿ ಪದವಿಧರನಾಗಿದ್ದೆನೆ. ಸೈಬರ್ ಕ್ರೈಂ ಗೆ ಸಂಬಂಧಪಟ್ಟಂತೆ ಸಿ ಐ ಡಿ, ಬೆಂಗಳೂರು ನಲ್ಲಿ , **Level**–1, **Level**–2 ನ ತರಭೇತಿ ಪಡೆದಿರುತ್ತೇನೆ.

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿ.02.01.2021 ರಂದು ಎನ್ ಆರ್ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ರವರು ನಮ್ಮ ಕಚೇರಿಗೆ ಪಂಚರೊಂದಿಗೆ ಬಂದು ಒಂದು ವಿವೋ ಮೊಬೈಲ್ ನ್ನು ಹಾಜರುಪಡಿಸಿ , ಆ ಮೊಬೈಲ್ ನಲ್ಲಿ ಇರುವ **Data** ವನ್ನು ತೆಗೆದುಕೊಡಬೇಕು ಎಂದು ಕೇಳಿದರು.

ಆ ಮೊಬೈಲ್ ನ್ನು ಒಂದು ಬಿಳಿಯ ಬಟ್ಟೆಯೊಳಗೆ ಮೊಹರು ಮಾಡಲಾಗಿತ್ತು. ಅದನ್ನು ಪಂಚರ ಸಮಕ್ಷಮ ತೆರೆದು, ಮೊಬೈಲ್ ನ್ನು ಹೊರ ತೆಗೆದು ನನಗೆ ನೀಡಿದರು. ನಾನು ನಮ್ಮ ಠಾಣೆಯಲ್ಲಿ ಇರುವಂತಹ **Antalyzer System** ಗೆ ಅಳವಡಿಸಿ ಸದರಿ ಮೊಬೈಲ್ ನಲ್ಲಿ ಇದ್ದ **Data** ತಗೆಯಲು **Ufed Software** ನ್ನು ಬಳಸಿ ತೆಗೆದಿರುತ್ತೇನೆ.

2. ಆ ಮೊಬೈಲ್ ನಲ್ಲಿ ಒಂದು ಸಿಮ್ ಇತ್ತು. ಆ ಮೊಬೈಲ್ ನ ವಾಟ್ಸಾ ಅಪ್ ನಲ್ಲಿ ವಿನು ಅಣ್ಣ ಎಂದು ಸೇವ್ ಆಗಿರುವ ನಂಬರಿ ನಲ್ಲಿ ಒಂದು ಮೆಸೇಜ್ ಮತ್ತು 3 ಪೋಟೋಗಳು ಬಂದಿವೆ. ಅವುಗಳನ್ನು **Extract** ಮಾಡಿ ಕೊಡಬೇಕಾಗಿ ಕೇಳಿದ್ದರು. ಸದರಿ ಮೊಬೈಲ್ ನ ವಾಟ್ಸ ಅಪ್ ನಲ್ಲಿ ವಿನು ಅಣ್ಣ ಎಂದು ಸೇವ್ ಆಗಿದ್ದ ನಂಬರ್ ಇತ್ತು. ಕೊಲೆಗೆ ಸಂಬಂದಪಟ್ಟಂತೆ 3 ಪೋಟೋಗಳು ಆ ನಂಬರ್ ಗೆ ಬಂದಿದ್ದವು. ಹಾಗೂ 3 ಟೆಕ್ಸ್ ಮೇಸೇಜ್ ಗಳು ಆ ನಂಬರ್ ಗೆ ಬಂದಿದ್ದವು. ನಾನು **Data Extract** ಮಾಡಲು ಸಂಜೆ 06.50–07.20 ರವರೆಗೆ ಸಮಯ ತೆಗೆದುಕೊಂಡಿರುತ್ತೇನೆ. ನಂತರ ಆ **Data Extract** ನ್ನು ತನಿಖಾಧಿಕಾರಿಯವರಿಗೆ ಕೊಟ್ಟಿರುತ್ತೇನೆ. ಪುನಃ ಆ ಮೊಬೈಲ್ ನ್ನು ತನಿಖಾಧಿಕಾರಿ ನನ್ನಿಂದ ವಾಪಾಸ್ ಪಡೆದು ಅದನ್ನು ಅಮಾನತ್ತು ಪಡಿಸಿಕೊಂಡರು. ಅದರ ಮೇಲೆ **M** ಎಂಬ ಮೊಹರನ್ನು ಹಾಕಿದರು. ಮತ್ತು ಅದಕ್ಕೆ **Q–1** ಎಂದು ನಂಬರ್ ನ್ನು ಕೊಟ್ಟರು. ಆ ಮೊಬೈಲ್ ನ್ನು ಅಮಾನತ್ತುಪಡಿಸಿಕೊಳ್ಳುವಾಗ ಮಹಜರ್ ನ್ನು ಮಾಡಿದ್ದು ಅದಕ್ಕೆ ನನ್ನ ಸಹಿಯನ್ನು ಪಡೆದಿರುತ್ತಾರೆ. ಸದರಿ ಮಹಜರ್ ನ್ನು ಈಗಾಗಲೇ ನಿಪಿ.29 ಎಂದು ಗುರುತುಪಡಿಸಿಕೊಳ್ಳಲಾಗಿರುತ್ತದೆ.

3. ಸದರಿ ಮೊಬೈಲ್ ನ್ನು ಇಂದು ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ . ಅದನ್ನು ಈಗಾಗಲೇ ಎಂಒ–11 ಎಂದು ಗುರುತುಪಡಿಸಿಕೊಳ್ಳಲಾಗಿದೆ.

4. ದಿ.06.03.2021 ರಲ್ಲಿ ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ನಮ್ಮ ಪ್ರಕರಣದ ತನಿಖಾಧಿಕಾರಿಯವರು ಮತ್ತೊಂದು ಸ್ಯಾಮ್ ಸಂಗ್ ಮೊಬೈಲ್ ನ್ನು ತೆಗೆದುಕೊಂಡು ಬಂದು ಅದರಲ್ಲಿರುವ ಡಾಟಾ ವನ್ನು **Extract** ಮಾಡಿಕೊಡಬೇಕೆಂದು ಕೇಳಿದ್ದರು. ಅದು ಮೊಹರಾಗಿದ್ದ ಬಿಳಿಯ ಬಣ್ಣದ ಬಟ್ಟೆಯ ಬ್ಯಾಗ್ ನಲ್ಲಿ ಇತ್ತು. ಪಂಚರ ಸಮಕ್ಷಮ ಆ ಮೊಬೈಲ್ ನ್ನು ಹೊರ ತೆಗೆದು ಹಾಜರುಪಡಿಸಿದರು. ನಂತರ ನಾನು ಆ ಮೊಬೈಲ್ ನ್ನು ಪರಿಶೀಲಿಸಿದೆ. ಅದು **ಸ್ಯಾಮ್ ಸಂಗ್ ಗ್ಯಾಲಕ್ಸಿ** ಎ 21 ಮೊಬೈಲ್ ಆಗಿತ್ತು. ನಾನು ನಮ್ಮ ಠಾಣೆಯಲ್ಲಿ ಇರುವಂತಹ **Antalyzer System** ಗೆ ಅಳವಡಿಸಿ ಸದರಿ ಮೊಬೈಲ್ ನಲ್ಲಿ ಇದ್ದ **Data** ತಗೆಯಲು **Ufed Software** ನ್ನು ಬಳಸಿ ತೆಗೆದಿರುತ್ತೇನೆ. ನಂತರ ಡಾಟಾ ವನ್ನು ತನಿಖಾಧಿಕಾರಿಯವರಿಗೆ ನೀಡಿರುತ್ತೇನೆ. ಆ ಡಾಟಾ ದಲ್ಲಿ ಏನು ಇರಲಿಲ್ಲ. ಪುನಃ ಆ ಮೊಬೈಲ್ ನ್ನು ತನಿಖಾಧಿಕಾರಿ ನನ್ನಿಂದ ವಾಪಾಸ್ ಪಡೆದು ಅದನ್ನು ಅಮಾನತ್ತು ಪಡಿಸಿಕೊಂಡರು. ಅದರ ಮೇಲೆ **M** ಎಂಬ ಮೊಹರನ್ನು ಹಾಕಿದರು. ಆ ಮೊಬೈಲ್ ನ್ನು ಅಮಾನತ್ತುಪಡಿಸಿಕೊಳ್ಳುವಾಗ ಮಹಜರ್ ನ್ನು ಮಾಡಿದ್ದು ಅದಕ್ಕೆ ನನ್ನ ಸಹಿಯನ್ನು ಪಡೆದಿರುತ್ತಾರೆ. ಸದರಿ ಮಹಜರ್ ನ್ನು ಈಗಾಗಲೇ ನಿಪಿ.32 ಎಂದು ಗುರುತುಪಡಿಸಿಕೊಳ್ಳಲಾಗಿರುತ್ತದೆ. ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ.32(ಬಿ) ಎಂದು ಗುರುತುಪಡಿಸಿಕೊಳ್ಳಲಾಯಿತು.

5. ಎರಡೂ ಬಾರಿಯೂ ಡಾಟಾ ವನ್ನು ಪೆನ್ ಡ್ರೈವ್ ಗೆ ಹಾಕಿ ತನಿಖಾಧಿಕಾರಿಯವರಿಗೆ ನೀಡಿದ್ದೆ. ಈ ಬಗ್ಗೆ ತನಿಖಾಧಿಕಾರಿಯವರ ಮುಂದೆ ಹೇಳಿಕೆ ನೀಡಿರುತ್ತೇನೆ.

6. **Cellebrite** ಮತ್ತು **Ufed Software** ಎರಡು ಒಂದೇ ಆಗಿರುತ್ತದೆ. ನಾನು ಕೊಟ್ಟಂತಹ ಪೆನ್ ಡ್ರೈವ್ ಮೂಲಕ ತನಿಖಾಧಿಕಾರಿಯವರು ಪ್ರಿಂಟ್ ಔಟ್ ಪಡೆದುಕೊಂಡಿರುತ್ತಾರೆ .

7. ನಾನು ವಿವೋ ಕಂಪನಿಯ ಮೊಬೈಲ್ ನಿಂದ ಪಡೆದಂತಹ **Data Extract** ನ **Hardcopy** ಯನ್ನು ಈಗ ನೋಡುತ್ತಿದ್ದೇನೆ. ಅದನ್ನು ನಿಪಿ.58 ಎಂದು ಗುರುತುಪಡಿಸಿಕೊಳ್ಳಲಾಯಿತು.

8. ನಾನು **ಸ್ಯಾಮ್ ಸಂಗ್ ಗ್ಯಾಲಕ್ಸಿ ಎ** 21 ಮೊಬೈಲ್ ಕಂಪನಿಯ ಮೊಬೈಲ್ ನಿಂದ ಪಡೆದಂತಹ **Data Extract** ನ **Hardcopy** ಯನ್ನು ಈಗ ನೋಡುತ್ತಿದ್ದೇನೆ. ಅದನ್ನು ನಿಪಿ.59 ಎಂದು ಗುರುತುಪಡಿಸಿಕೊಳ್ಳಲಾಯಿತು. ಸದರಿ ಮೊಬೈಲ್ ನ್ನು ಈಗ ನೋಡುತ್ತಿದ್ದೀನೆ. ಅದನ್ನು ಈಗಾಗಲೇ ಎಂಒ–12 ಎಂದು ಗುರುತುಪಡಿಸಿಕೊಳ್ಳಲಾಯಿತು.

ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ

9. ಆ ವಿವೋ ಮೊಬೈಲ್ ನಲ್ಲಿ ಇರುವ ದಿ.15.12.2020 ರ ಡಾಟಾ ಬೇಕೆಂದು ಕೇಳಿದ್ದರು. ಆ ದಿನ ನಾನು ಮೇಲೆ ಹೇಳಿದ 3 ಪೋಟೋಗಳು ಮತ್ತು 3 **text** ಮೇಸೇಜ್ ಗಳನ್ನು ಹೊರತು ಪಡಿಸಿ ಬೇರೇ ಡಾಟಾ ಸಹ

ಇದ್ದವು. ಆದರೆ ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ಇದ್ದಂತಹ ಡಾಟಾವನ್ನು **Extract** ಮಾಡಿ ಕೊಟ್ಟಿರುತ್ತೇನೆ. ದಿ.15.12.2020 ರ ನಂತರದ ದಿನಾಂಕಗಳ ಡಾಟಾ ಸಹ ಅದರಲ್ಲಿ ಇತ್ತು. ಮಾಬೈಲ್ ಗೆ ಲಾಕ್ ಮಾಡುವ ಸಲುವಾಗಿ ಕೋಡ್ ನ್ನಾಗಲೀ, ಆತನ ಫಿಂಗರ್ ಪ್ರಿಂಟ್ ನ್ನಾಗಲೀ ಇಟ್ಟಿರಲಿಲ್ಲ. ಸದರಿ ವಿವ್ರೋ ಕಂಪನಿಯ ಮೊಬೈಲ್ ಯಾರ ಹೆಸರಿನಲ್ಲಿ ಇತ್ತು ಎನ್ನುವುದು ನೋಡಲಿಲ್ಲ. ಸದರಿ ಪೋಟೋಗಳು ಮತ್ತು 3 ಮೇಸೇಜ್ ಗಳು ಪೋನ್ ನಲ್ಲಿ ಸೇವ್ ಆಗಿದ್ದವು. ಅಂದರೆ ವಾಟ್ಸ್ ಅಪ್ ನಲ್ಲಿ ಇದ್ದವು. ಅದರಲ್ಲಿ ಯಾವ ಹೆಸರಿನಲ್ಲಿ ಅವುಗಳು ಸೇವ್ ಆಗಿದ್ದವು ಎನ್ನುವುದು ನನಗೆ ಗೊತ್ತಿಲ್ಲ. ತನಿಖಾಧಿಕಾರಿ ನನಗೆ ವಿನು ಅಣ್ಣ ನ ಬಗ್ಗೆ ಮಾಹಿತಿ ನೀಡಲಿಲ್ಲ. ಆ ಮೂರು ಪೋಟೋಗಳು 3 ಸಂದೇಶಗಳು 02.55 ಗಂಟೆಯಿಂದ 02.56 ರವಗಿನ ಸಮಯದಲ್ಲಿ ಬಂದಿದ್ದವು. ಸಾಕ್ಷಿ ಪುನಃ ನುಡಿಯುತ್ತಾರೆ , ಟೈಮಿಂಗ್ಸ್ ಗೊತ್ತಿಲ್ಲ ಎಂದು. ನಿಪಿ.58 ರಲ್ಲಿ ಸಮಯವನ್ನು ತೋರಿಸುತ್ತಿಲ್ಲ ಎನ್ನುವುದು ಸರಿ. ನಾನು ಹೇಳಿದಂತೆ ವಿವ್ರೋ ಕಂಪನಿಯ ಮೊಬೈಲ್ ಮತ್ತು ಮೇಲೆ ಹೇಳಿದ ಸ್ಯಾಮ್ ಸಂಗ್ ಮೊಬೈಲ್ ನಿಂದ ಯಾವುದೇ ಡಾಟಾ **Extract** ಗಳನ್ನು ತೆಗೆದಿರುವುದಿಲ್ಲ ಮತ್ತು ಅವುಗಳನ್ನು ಪೆನ್ ಡ್ರೈವ್ ಹಾಕಿ ತನಿಖಾಧಿರಿಯವರಿಗೆ ಕೊಟ್ಟಿರುವುದಿಲ್ಲ ಎನ್ನುವುದು ಸರಿಯಲ್ಲ. **M** ಎಂದು ಮೊಹರು ಮಾಡಿದ ಬಿಳಿಯ ಬಟ್ಟೆಯ ಬ್ಯಾಗ್ ಮೇಲೆ ಪಿ ಎಫ್ ನಂಬರ್ ನ್ನು ಬರೆದಿದ್ದರು. ಆದರ ಆ ನಂಬರ್ ಈಗ ನನಗೆ ನೆನಪಿಲ್ಲ.

6. ಮಹಜರ್ ಗೆ ಇಬ್ಬರು ಪಂಚರು ಬಂದಿದ್ದರು. ಅವರ ಹೆಸರು ನನಗೆ ಈಗ ನೆನಪಿಲ್ಲ .

7. ನಮ್ಮ ಠಾಣೆಗೆ ಎನ್ ಆರ್ ಪೊಲೀಸ್ ಠಾಣೆಯ ಈ ಪ್ರಕರಣದ ತನಿಖಾಧಿಕಾರಿಯವರು ಯಾವುದೇ ಮೊಬೈಲ್ ಗಳನ್ನು ತಂದಿರಲಿಲ್ಲ ಎನ್ನುವುದು ಸರಿಯಲ್ಲ.

8. ಸ್ಯಾಮ್ ಸಂಗ್ ಗ್ಯಾಲಾಕ್ಸಿ ಪೋನ್ ಯಾರ ಹೆಸರಿನಲ್ಲಿ ಇತ್ತು ಎನ್ನುವುದು ನನಗೆ ಗೊತ್ತಿಲ್ಲ. ಗ್ಯಾಲಕ್ಸಿ ಮೊಬೈಲ್ ನಿಂದ ವಿವೋ ಮೊಬೈಲ್ ಗೆ ಪೋಟೋಗಳು ಮತ್ತು ಸಂದೇಶಗಳು ರವಾನೆಯಾಗಿರುತ್ತವೆ ಎಂದು, ಆ ಎರಡು ಮೊಬೈಲ್ ಗಳನ್ನು ಡಾಟಾ **Extract** ಗಳಿಗಾಗಿ ತಂದಿದ್ದರು. ಸದರಿ ಮೊಬೈಲ್ ನ್ನು **retrive** ಮಾಡಿದೆವು. ಆದರೆ ಯಾವುದೇ ಡಾಟಾ **Extract** ಆಗಿರಲಿಲ್ಲ.

9. ವಿವೋ ಮೊಬೈಲ್ ಇದ್ದಂತಹ 3 ಪೋಟೋಗಳು ಮತ್ತು 3 ಸಂದೇಶಗಳು ಯಾವ ಮೊಬೈಲ್ ನಂಬರ್ ನಿಂದ ಬಂದಿದ್ದವು ಎನ್ನುವುದನ್ನು ನಾನು ನೋಡೀಲಿಲ್ಲ. ನಿಪಿ.58 ಮತ್ತು ನಿಪಿ.59 ಕ್ಕೂ ಹಾಗೂ ಈ ಎರಡು ಮೊಬೈಲ್ ಗಳಿಗೂ , ಅವುಗಳಲ್ಲಿ ಇರುವಂತಹ ಸಂದೇಶಗಳು ಮುತ್ತು ಪೋಟೋಗಳಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎನ್ನುವುದು ಸರಿಯಲ್ಲ.

**2 ನೇ ಆರೋಪಿ ಪರ ವಕೀಲರು ಮೇಲ್ಕಂಡ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**ಮರು ವಿಚಾರಣೆ ಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**